ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಸದರಿ ಪ್ರಶ್ನೆಯನ್ನು ಇದೇ ಅಧಿವೇಶನಾವಧಿಯಲ್ಲಿ ಕೇಳುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈ ಪ್ರಶ್ನೆಯಲ್ಲಿನ ಕೊನೆಯ ಪ್ರಶ್ನೆಗಾದರೂ ಮಾನ್ಯ ಸಚಿವರು ಉತ್ತರ ಕೊಡಲಿ...

ಅಧ್ಯಕ್ಷರು:- ತರಿಸಿ ಕೊಡುತ್ತೇನೆ. ಮಾನ್ಯ ಸದಸ್ಯರುಗಳವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರಶ್ನೋತ್ತರದ ಅವಧಿಯಲ್ಲಿ ಪ್ರಶ್ನೆ ಕೇಳುವವರು ಮತ್ತು ಉತ್ತರ ಕೊಡುವವರು ತಯಾರಾಗಿ ಬರಬೇಕು. ಪ್ರಶ್ನೆ ಕೇಳುವವರು ಸಂಕ್ಷಿಪ್ತವಾಗಿ ಕೇಳಬೇಕು ಹಾಗೂ ಉತ್ತರ ಕೊಡುವವರೂ ಸಂಕ್ಷಿಪ್ತವಾಗಿ ಉತ್ತರಿಸಬೇಕು. ದಿವಸವೂ ಪ್ರಶ್ನೋತ್ತರ ವೇಳೆಯ ಅವಧಿಯು ಮುಗಿದ ಮೇಲೆಯೂ ನಡೆಸುವುದು ಕಷ್ಟವಾಗುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಒಂದು ಗಂಟೆಯಾದ ಕೂಡಲೇ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯ ಮಾಡುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಅವಧಿಯಲ್ಲಿ ತಮ್ಮತಮ್ಮಲ್ಲೆ ಮಾತನಾಡಿಕೊಳ್ಳುತ್ತಿರುವುದು ಬಹಳ ಹೆಚ್ಚಾಗುತ್ತಿದೆ, ಮಾತಿನ ರಭಸವೂ ಹೆಚ್ಚಾಗುತ್ತಿದೆ. ಈ ಬಗ್ಗೆ ಸಹಕರಿಸಬೇಕೆಂದು ಎಲ್ಲಾ ಶಾಸಕರೂ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

3. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು):- ಅಧ್ಯಕ್ಷರೇ ದಿನಾಂಕ 12ನೇ ಫೆಬ್ರವರಿ 1997ರ ಮೊದಲನೆಯ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 27 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ:- ಹೃದಯರೋಗ ತಜ್ಞಶಸ್ತ್ರ ಚಿಕಿತ್ಸೆಯ ಬಗ್ಗೆ.

2(61)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕರ್ನಾಟಕ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಹೃದಯರೋಗ ತಜ್ಞ ಶಸ್ತ್ರ ಚಿಕಿತ್ಸೆ ವಿಭಾಗದಲ್ಲಿ ಪದವಿ ಪಡೆದವರ ಸಂಖ್ಯೆ ಎಷ್ಟು;

ಆ) ಸರ್ಕಾರಿ ಸೇವೆಯಲ್ಲಿ ಎಷ್ಟು ಹೃದಯರೋಗ ತಜ್ಞ ಶಸ್ತ್ರ ಚಿಕಿತ್ಸಕರು ಹಾಗೂ ವೈದ್ಯರು ಇರುವರು? ಯಾವ ಯಾವ ಆಸ್ಪತ್ರೆಗಳಲ್ಲಿ ಸೇವೆ ಮಾಡುತ್ತಿರುವರು? (ವಿವರ ನೀಡುವುದು).